1	ಧಾರವಾಡ	17.438	856
2	ಗದಗ	20.433	1.528
3	ಹಾವೇರಿ	46.388	2.260
4	ಬಿಜಾಪುರ	98.813	4.579
5	ಬಾಗಲಕೋಟೆ	81.344	6.294
6	ಬೆಳಗಾಂ	191.638	14.932
7	ಉತ್ತರ ಕನ್ನಡ	44.566	150
	ಒಟ್ಟು	**5.00.620**	**30,599**
ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ			
1	ಗುಲ್ಬರ್ಗಾ	45.977	0
2	ಬೀದರ್	56.983	0
3	ರಾಯಚೂರು	42.641	0
4	ಕೊಪ್ಪಳ	47.460	0
5	ಬಳ್ಳಾರಿ	56.525	0
6	ಯಾದಗಿರಿ	18.084	0
	ಒಟ್ಟು	**270.670**	**0**
	ಒಟ್ಟು ಸಂಖ್ಯೆ	**18,015.566**	**1.25.303**

ಅಂಗನವಾಡಿ ಶಿಕ್ಷಕರುಗಳ ಬೇಡಿಕೆಗಳು

51(347) ಶ್ರೀ ರಾಜು ಕೆ. (ರಾಮನಗರ): ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂಗನವಾಡಿ ಶಿಕ್ಷಕಿಯರ ಬೇಡಿಕೆಯನ್ನು ಈಡೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಯಾವಾಗ ಈಡೇರಿಸಲಾಗುವುದು?

ಆ) ಇವರುಗಳ ಬೇಡಿಕೆಗಳಿಗೆ ಸ್ಪಂದಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಇ) ಅಂಗನವಾಡಿ ಶಿಕ್ಷಕಿಯರಿಗೆ ವಿಶೇಷವಾಗಿ ಸೇವಾ ನಿಯಮಾವಳಿಗಳನ್ನು ರೂಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

ಈ) ಹಾಗಿದ್ದಲ್ಲಿ ಯಾವಾಗ ರೂಪಿಸಲಾಗುವುದು?

ಶ್ರೀ ಸಿ.ಸಿ ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಉ) ಹೌದು, ಈಗಾಗಲೇ ಅಂಗನವಾಡಿ ಶಿಕ್ಷಕಿಯರ ಪ್ರಮುಖ ಬೇಡಿಕೆಗಳಾದ ಅಂಗನವಾಡಿ ಕಾರ್ಯಕರ್ತೆಯರು/ ಸಹಾಯಕಿಯರಿಗೆ ನಿವೃತ್ತಿ ವಯಸ್ಸನ್ನು ನಿಗದಿಪಡಿಸಿ ಪಿಂಚಣಿ ನೀಡುವುದು, ಅವರನ್ನು

ಮೇಲ್ವಿಚಾರಕಿಯರಾಗಿ ನೇಮಿಸುವುದು, ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಸ್ಥಳೀಯ ಆಹಾರ ಪದಾರ್ಥಗಳನ್ನು ನೀಡುವುದು, ಕಾಲಕಾಲಕ್ಕೆ ತರಬೇತಿ ನೀಡುವುದು, ಐ.ಸಿ.ಡಿ.ಎಸ್ ಯೋಜನೆಯನ್ನು ಸಾರ್ವತ್ರಿಕರಣಪಡಿಸುವುದರ ಬಗ್ಗೆ ಬೇಡಿಕೆಗಳಿರುತ್ತವೆ.

ಮಿನಿ ಅಂಗನವಾಡಿ ಕೇಂದ್ರಗಳನ್ನು ಮುಖ್ಯ ಅಂಗನವಾಡಿ ಕೇಂದ್ರಗಳಾಗಿ ಪರಿವರ್ತಿಸುವ ಬಗ್ಗೆ ಆರೋಗ್ಯ, ಶಿಕ್ಷಣ ಮತ್ತು ಸಮಾಜ ಕಲ್ಯಾಣ ಮತ್ತು ಚುನಾವಣಾ ಆಯೋಗದಲ್ಲಿ ಹುದ್ದೆಗಳಿಗೆ ಕಾರ್ಯಕರ್ತೆಯರನ್ನು ಅರ್ಹತೆ ಮೇಲೆ ಆಯ್ಕೆ ಮಾಡುವ ಬಗ್ಗೆ ಮೇಲ್ವಿಚಾರಕಿಯರ ಹುದ್ದೆಯ ಆಯ್ಕೆಯಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಿಸುವ ಬಗ್ಗೆ ಸಂಬಂಧಿಸಿದವರೊಡನೆ ವ್ಯವಹರಿಸಲಾಗಿದೆ.

ಪ್ರಮುಖ ಬೇಡಿಕೆಗಳಲ್ಲಿ ಕೆಳಕಂಡವುಗಳನ್ನು ಈಡೇರಿಸಲಾಗಿದೆ.

1) ಬೇಸಿಗೆ ರಜೆಯನ್ನು 10 ರಿಂದ 15 ದಿನಗಳಿಗೆ ಹೆಚ್ಚಿಸಲಾಗಿದೆ.

2) ಗರ್ಭಕೋಶ ಸಂಬಂಧ ಕಾಯಿಲೆಗೆ ವೈದ್ಯಕೀಯ ವೆಚ್ಚ ಮರುಪಾವತಿಸಲು ಒಪ್ಪಲಾಗಿದೆ.

3) ಅಂಗನವಾಡಿ ಕೇಂದ್ರ ಕೆಲಸದ ಅವಧಿಯನ್ನು ಬೆಳಿಗ್ಗೆ 9.30ರಿಂದ ಮಧ್ಯಾಹ್ನ 1.30 ಗಂಟೆಗೆ ಬದಲಾಗಿ 9.30ರಿಂದ ಅಪರಾಹ್ನ 4.00 ಗಂಟೆವರೆಗೆ ಹೆಚ್ಚಿಸುವ ಪ್ರಸ್ತಾವನೆ ಆದೇಶ ಹೊರಡಿಸುವ ಹಂತದಲ್ಲಿರುತ್ತದೆ.

4) ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ಈ ಮೊದಲು ನೀಡುತ್ತಿದ್ದ ಆಹಾರ ಪದಾರ್ಥಗಳಲ್ಲಿ ಬದಲಾವಣೆ ಮಾಡಲಾಗಿದೆ.

5) ಐ.ಸಿ.ಡಿ.ಎಸ್. ಯೋಜನೆಯನ್ನು ಸಾರ್ವತ್ರಿಕರಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಕಾಲಕಾಲಕ್ಕೆ ಸಿಬ್ಬಂದಿಗಳ ಲಭ್ಯತೆಗನುಗುಣವಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಕೆಳಕಂಡ ಬೇಡಿಕೆಗಳ ಅನುಷ್ಠಾನಕ್ಕಾಗಿ ವಿವಿಧ ಇಲಾಖೆಗಳನ್ನು ಸಂಪರ್ಕಿಸಲಾಗಿದೆ.

1) ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ನಿವೃತ್ತಿ ವಯಸ್ಸು ನಿಗದಿಪಡಿಸಿ ಪಿಂಚಣಿ ನೀಡುವ ಪ್ರಸ್ತಾವನೆಯು ಅಂತಿಮ ಹಂತದಲ್ಲಿರುತ್ತದೆ.

2) ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಗೌರವಧನ ಹೆಚ್ಚಿಸುವ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ.

3) ಆರೋಗ್ಯ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಗ್ರೂಪ್-ಸಿ ಮತ್ತು ಡಿ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಆದ್ಯತೆ ನೀಡಲು ಕೋರಲಾಗುತ್ತಿದೆ.

ಆ) ಉಳಿದ ಬೇಡಿಕೆಗಳನ್ನು ಆಯವ್ಯಯದ ಲಭ್ಯತೆಗನುಗುಣವಾಗಿ ನಿಯಮಾನುಸಾರ ಈಡೇರಿಸುವ ಕುರಿತು ಪರಿಶೀಲಿಸಲಾಗುವುದು.

ಇ) ಇಲ್ಲ.

ಈ) ಪ್ರಶ್ನೆ 'ಇ' ನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಧರ್ಮಸ್ಥಳದ ಲಕ್ಷ ದೀಪೋತ್ಸವದ ಪ್ರಯುಕ್ತ ಓಡಿಸಿದ ಬಸ್ಸುಗಳು

52 (249) ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ): ಮಾನ್ಯ ಒಳಾಡಳಿತ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ: 01-12-2010ರಿಂದ 06-12-2010 ರವರೆಗೆ ಜರುಗಿದ ಶ್ರೀ ಕ್ಷೇತ್ರ ಧರ್ಮಸ್ಥಳದ ಲಕ್ಷ ದೀಪೋತ್ಸವದ ಪ್ರಯುಕ್ತ ಎಷ್ಟು ಬಸ್ಸುಗಳನ್ನು ಓಡಿಸಲಾಗಿದೆ;

ಆ) ಸದರಿ ಅವಧಿಯಲ್ಲಿ ನಿಗಮವು ಗಳಿಸಿದ ಆದಾಯ ಎಷ್ಟು;

ಇ) ಸದರಿ ಅವಧಿಯಲ್ಲಿ ಧರ್ಮಸ್ಥಳ ಘಟಕವು ಗಳಿಸಿದ ಆದಾಯ ಎಷ್ಟು;